ಆಸ್ಪತ್ರೆಗಳಲ್ಲಿನ ವಿವಿಧ ಸೌಲಭ್ಯಗಳು

33 (74)

ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ)

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿಯಲ್ಲಿ ಶಿವಮೊಗ್ಗ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಆಸ್ಪತ್ರೆಗಳು ಯಾವುವು; ಈ ಆಸ್ಪತ್ರೆಗಳಿಗೆ ಏನೇನು ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ(ಆಸ್ಪತ್ರೆವಾರು ವಿವರ ನೀಡುವುದು);

ಆ) ಈ ಕ್ಷೇತ್ರದಲ್ಲಿರುವ ಆಸ್ಪತ್ರೆ ಕಟ್ಟಡಗಳ ಸ್ಥಿತಿಗಳನ್ನು ಅಧ್ಯಯನ ಮಾಡಲಾಗಿದೆಯೇ; ಏನೇನು ಕೊರತೆಗಳಿವೆ (ವಿವರ ನೀಡುವುದು);

ಇ) ಎಷ್ಟು ಆಸ್ಪತ್ರೆಗಳ ಕೇಂದ್ರ ಸ್ಥಾನದಲ್ಲಿ ಎ.ಎನ್.ಎಂ.ಗಳು ಸ್ಟಾಫ್ ನರ್ಸ್‌ಗಳು ಹಾಗೂ ವೈದ್ಯರು ಸೇರಿದಂತೆ ಸಿಬ್ಬಂದಿಗಳು ವಾಸ್ತವ್ಯ ಮಾಡುತ್ತಿದ್ದಾರೆ(ಆಸ್ಪತ್ರೆವಾರು ವಿವರ ನೀಡುವುದು);

ಈ) ಶಿವಮೊಗ್ಗ ವಿಧಾನಸಭಾ ಕ್ಷೇತ್ರದಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳ ವಸತಿ ಗೃಹಗಳ ದುರಸ್ಥಿಗಾಗಿ ಎಷ್ಟು ಹಣ್ಣ ವೆಚ್ಚ ಮಾಡಲಾಗಿದೆ; ಹಾಲಿ ವಸತಿ ಗೃಹಗಳಲ್ಲಿ ಯಾರು ಯಾರು ವಾಸವಾಗಿದ್ದಾರೆ(ಪೂರ್ಣ ವಿವರ ನೀಡುವುದು);

ಉ) ಕ್ಷೇತ್ರದ ಯಾವ ಯಾವ ಆಸ್ಪತ್ರೆಗಳಲ್ಲಿ 108 ಅಂಬುಲೆನ್ಸ್‌ಗಳು, ಜನರೇಟರ್‌ಗಳು ಹಾಗೂ ಇತರೆ ಉಪಕರಣಗಳು ಇವೆ (ವಿವರ ನೀಡು–ವುದು);

ಊ) ಯಾವ ಯಾವ ಕ್ಷೇತ್ರಗಳಲ್ಲಿ ಸಿಬ್ಬಂದಿಗಳ ಕೊರತೆ ಇದೆ; (ವಿವರ ನೀಡುವುದು);

ಋ) ಜಿಲ್ಲೆಯಲ್ಲಿರುವ ವಿವಿಧ ಸರ್ಕಾರಿ ಆಸ್ಪತ್ರೆಗಳೆಷ್ಟು; ಖಾಸಗಿ ನರ್ಸಿಂಗ್ ಹೋಂಗಳೆಷ್ಟು; ಈ ಆಸ್ಪತ್ರೆಗಳಲ್ಲಿ ಜಲ ತ್ಯಾಜ್ಯ ನಿರ್ವಹಣೆಗೆ ಇರುವ ನಿಯಮಗಳೇನು? ಈ ನಿಯಮಗಳನ್ನು ಪಾಲಿಸಲಾಗಿದೆಯೇ; (ಆಸ್ಪತ್ರೆವಾರು ವಿವರ ನೀಡುವುದು)?

ಶ್ರೀ ಅರವಿಂದ ಲಿಂಬಾವಳಿ
(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿಯಲ್ಲಿ ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಆಸ್ಪತ್ರೆಗಳ ಪಟ್ಟಿ ಮತ್ತು ಒದಗಿಸಿರುವ ಸೌಲಭ್ಯಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ಆಸ್ಪತ್ರೆ ಕಟ್ಟಡಗಳ ಸ್ಥಿತಿಗಳನ್ನು ಅಧ್ಯಯನ ಮಾಡಿರುವ ಬಗ್ಗೆ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಇ) ಆಸ್ಪತ್ರೆಗಳ ಕೇಂದ್ರ ಸ್ಥಾನದಲ್ಲಿ ಎ.ಎನ್.ಎಂ.ಗಳು ಸ್ಟಾಫ್ ನರ್ಸ್‌ಗಳು ಹಾಗೂ ವೈದ್ಯರು ಸೇರಿದಂತೆ ಸಿಬ್ಬಂದಿಗಳು ವಾಸ್ತವ್ಯದ ವಿವರಗಳನ್ನು ಅನುಬಂಧ–3 ರಲ್ಲಿ ನೀಡಲಾಗಿದೆ.

ಈ) ಶಿವಮೊಗ್ಗ ವಿಧಾನಸಭಾ ಕ್ಷೇತ್ರದಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳ ವಸತಿ ಗೃಹಗಳ ದುರಸ್ಥಿಗಾಗಿ 2010–11ನೇ ಸಾಲಿಗೆ ರೂ.57,000/– ಮತ್ತು 2012–13ನೇ ಸಾಲಿನಲ್ಲಿ ರೂ.80,000/– ಅನ್ನು ವೆಚ್ಚ ಮಾಡಲಾಗಿದೆ. ವಸತಿ ಗೃಹಗಳಲ್ಲಿ ವಾಸವಾಗಿರುವ ಅಧಿಕಾರಿ/ನೌಕರರ ವಿವರಗಳನ್ನು ಅನುಬಂಧ–3 ರಲ್ಲಿ ನೀಡಲಾಗಿದೆ.

ಉ) 108 ಅಂಬುಲೆನ್ಸ್‌ಗಳು, ಜನರೇಟರ್‌ಗಳು ಹಾಗೂ ಇತರೆ ಉಪಕರಣಗಳ ವಿವರಗಳನ್ನು ಅನುಬಂಧ –4 ರಲ್ಲಿ ನೀಡಲಾಗಿದೆ.

ಊ) ಕೊರತೆಯಿರುವ ಸಿಬ್ಬಂದಿಗಳ ವಿವರಗಳನ್ನು ಅನುಬಂಧ–5 ರಲ್ಲಿ ನೀಡಲಾಗಿದೆ.

ಋ) ಶಿವಮೊಗ್ಗ ಜಿಲ್ಲೆಯಲ್ಲಿರುವ ಸರ್ಕಾರಿ ಆಸ್ಪತ್ರೆಗಳು ಖಾಸಗಿ ನರ್ಸಿಂಗ್ ಹೋಂಗಳ ವಿವರ ಅನುಬಂಧ–6 ರಲ್ಲಿ ನೀಡಲಾಗಿದೆ. ಆಸ್ಪತ್ರೆಗಳಲ್ಲಿ ಉತ್ಪನ್ನವಾಗುವ ಜಲ ತ್ಯಾಜ್ಯವನ್ನು ಕ್ರಿಮಿನಾಶಕದಿಂದ ಚಿಕಿತ್ಸೆಗೊಳಪಡಿಸಿ ಒಳಚರಂಡಿ/ ಇಂಗುಬಚ್ಚಲುಗಳಿಗೆ ಬಿಡಬೇಕು. ಎಂಬುದು ನಿಯಮವಿರುತ್ತದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಈ ವಿಧಾನವನ್ನು ಅನುಸರಿಸ–ಲಾಗುತ್ತಿದೆ.